ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1165(1630)
ಸದಸ್ಯರ ಹೆಸರು ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನ ಬಾಗೇವಾಡಿ)
ಉತ್ತರಿಸುವ ಸಚಿವರು ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಪ್ರಶ್ನೆ	ಉತ್ತರ
ಅ) ಉತ್ತರ ಕರ್ನಾಟಕದಲ್ಲಿ ಖಾಯಂ ಹೈಕೋರ್ಟ್ ಪೀಠವನ್ನು ಸ್ಥಾಪಿಸ ಬೇಕೆಂಬ ಬೇಡಿಕೆ ಮತ್ತು ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ,	ಹೌದು
ಆ) ಉತ್ತರ ಕರ್ನಾಟಕದಲ್ಲಿ ಖಾಯಂ ಹೈಕೋರ್ಟ್ ಪೀಠ ಸ್ಥಾಪಿಸುವ ಇಚ್ಚೆ ಸರ್ಕಾರಕ್ಕೆ ಇದೆಯೆ,	ಹೌದು
ಇ) ಉತ್ತರ ಕರ್ನಾಟಕದ ಯಾವ ಸ್ಥಳ ಹೈಕೋರ್ಟ್ ಪೀಠ ಸ್ಥಾಪಿಸಲಾಗುವುದು	ಧಾರವಾಡ ಮತ್ತು ಗುಲ್ಬರ್ಗಾ
ಈ) ಉತ್ತರ ಕರ್ನಾಟಕದಲ್ಲಿ ಯಾವ ನಿರ್ದಿಷ್ಟ ಕಾಲ ಮಿತಿಯೊಳಗೆ ಹೈಕೋರ್ಟ್ ಪೀಠ ಸ್ಥಾಪಿಸಲಾಗುವುದು	ಧಾರವಾಡದ ಹೈಕೊರ್ಟ್ ಪೀಠ ಕಟ್ಟಡ ಕಾಮಗಾರಿಯನ್ನು ಫೆಬ್ರವರಿ 2008ರ ಅಂತ್ಯದೊಳಗೆ ಹಾಗೂ ಗುಲ್ಬರ್ಗಾ ಹೈಕೊರ್ಟ್ ಪೀಠ ಕಟ್ಟಡ ಕಾಮಗಾರಿಯನ್ನು ಏಪ್ರಿಲ್ 2008ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು
ಉ) ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಮಧ್ಯವರ್ತಿ ಸ್ಥಳವಾದ ವಿಜಾಪುರದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಲಾಗುವುದೇ?	ಇಲ್ಲ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ 1166(1486)
ಸದಸ್ಯರ ಹೆಸ್ರು ಶ್ರೀ ಸಿದ್ದು ಸಾವದಿ(ಜಮಖಂಡಿ)
ಉತ್ತರಿಸುವ ಸಚಿವರು ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಜಮಖಂಡಿ ತಾಲ್ಲೂಕಿನಲ್ಲಿರುವ ಬಸ್ ನಿಲ್ದಾಣಗಳು ಹಾಳಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೆ

ಜಮಖಂಡಿ, ಬನಹಟ್ಟಿ, ರಬಕವಿ ಮತ್ತು ತೆರದಾಳಗಳಲ್ಲಿ ಬಸ್ ನಿಲ್ದಾಣಗಳು ಹಾಳಾಗಿರುವುದು ಗಮನಕ್ಕೆ ಬಂದಿದೆ

ಆ) ಬಂದಿದ್ದರೆ ಯಾವ ಕ್ರಮ ಜರುಗಿಸಲಾಗಿದೆ,

1) ಜಮಖಂಡಿ ಹಾಗೂ ಬನಹಟ್ಟಿ ಬಸ್ ನಿಲ್ದಾಣಗಳಲ್ಲಿ ರೂ 32 00 ಲಕ್ಷಗಳ ವೆಚ್ಚದಲ್ಲಿ ನಿರ್ಮಲ ಮಾದರಿಯ ಶೌಚಾಲಯಗಳನ್ನು ನಿರ್ಮಿಸಲು ಕಾರ್ಯ ಯೊಜನೆಯನ್ನು ರೂಪಿಸಲಾಗಿದೆ

2) ಬನಹಟ್ಟಿ ರಬಕವಿ ಮತ್ತು ತೆರೆದಾಳ ಬಸ್ ನಿಲ್ದಾಣದ ಆವರಣಕ್ಕೆ ಡಾಂಬರೀಕರಣ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ

3)ಬನಹಟ್ಟಿ ಮತ್ತು ರಬಕವಿ ಬಸ್ ನಿಲ್ದಾಣಗಳಲ್ಲಿ ಪ್ರತಿ ಬಸ್ ನಿಲ್ದಾಣಕ್ಕೆ ರೂ 10 00ಲಕ್ಷಗಳ ವೆಚ್ಚದಲ್ಲಿ ಮೆಲ್ದರ್ಜೆಗೇರಿಸಲು ಕ್ರೀಯಾ ಯೋಜನೆಯನ್ನು ರೂಪಿಸಲಾಗಿದ್ದು ಆದಷ್ಟು ಬೇಗ ಈ ಬಗ್ಗೆ ಕ್ರಮ ಕ್ಯಗೊಳ್ಳಲಾಗುವುದು

ಇ) ಬಸ್ ನಿಲ್ದಾಣಗಳಲ್ಲಿಯ ರಸ್ತೆ, ಶೌಚಾಲಯದ, ಕುಡಿಯುವ ನೀರು ಸ್ವಚ್ಛತೆ ಎಲ್ಲವೂ ಮಿತಿ ಮೀರಿ ಹಾಳಾದರೂ ಸಹ ಇಲಾಖೆ ಇತ್ತ ನೋಡದೇ ಇರಲು ಕಾರಣಗಳೇನು,

ಸಂಸ್ಥೆಯ ಆರ್ಥಿಕ ಪರಿಸ್ಥಿಯು ತೃಪ್ತಿಕರವಾಗಿಲ್ಲದಿರುವುದರಿಂದ ಮೂಲಭೂತ ಸೌಕರ್ಯಗಳ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಾಗಿರುವುದಿಲ್ಲ, ಆದಾಗ್ಯೂ ಆಯಾ ಹಂತಗಳಲ್ಲಿ ಅತೀ ಅವಶ್ಯಕವಿರುವ ಸಣ್ಣ ಕಾಮಗಾರಿಗಳನ್ನು ನಿರ್ವಹಿಸಲಾಗಿರುತ್ತದೆ

ಈ) ಈಗಲಾದರೂ ಜೀರ್ಣೋದ್ಧಾರ ಮಾಡುವ ಯೋಜನೆ ಇದೆಯೇ,

ಹೌದು

ಉ) ಇದ್ದರೆ ಯಾವಾಗ ಮಾಡಲಾಗುವುದು,

2007–08ನೇ ಸಾಲಿನಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು

ಊ) ಜಮಖಂಡಿ ಡಿಪೋದಲ್ಲಿ ಅವಧಿ ಮೀರಿದ ಎಷ್ಟು ಬಸ್ಸುಗಳಿವೆ,

39 ಬಸ್ಸುಗಳು

ಋ) ಬಸ್ಸುಗಳನ್ನು ಯಾವಾಗ ಬದಲಾಯಿಸಲಾಗುವುದು,

ಅವಧಿ ಮೀರಿದ ಬಸ್ಸುಗಳನ್ನು ಹಂತಹಂತವಾಗಿ ಬದಲಾಯಿಸಲಾಗುವುದು ಪ್ರಸಕ್ತ ಸಾಲಿನಲ್ಲಿ ಜಮಖಂಡಿ ಡಿಪೋಗೆ 21 ಹೊಸ ವಾಹನಗಳನ್ನು ಒದಗಿಸಲಾಗಿದೆ

ಎ) ಜಮಖಂಡಿಗೆ ಓಲ್ವೋ ಬಸ್ಸಿನ ಸಲುವಾಗಿ ಹತ್ತಾರು ಬಾರಿ ಮನವಿಕೊಟ್ಟರೂ ಪ್ರಾರಂಭಿಸದೇ ಇರಲು ಕಾರಣಗಳೇನು,

ಮಾನ್ಯ ಜಮಖಂಡಿ ಶಾಸಕರ ಕೋರಿಕೆಯ ಮೇರಗೆ ಈ ಹಿಂದೆ ದಿ 9 5 2005ರಿಂದ ಜಮಖಂಡಿಗೆ ಹೊಸ ರಾಜಹಂಸ ಸಾರಿಗೆಯನ್ನು ವಿಶೇಷ ಪ್ರೋತ್ಸಾಹಕ ಪ್ರಯಾಣ ದರದ ಅಡಿಯಲ್ಲಿ ಪ್ರಾರಂಬಿಸಲಾಯಿತು, ಆದರೆ ಸದರಿ ಸಾರಿಗೆಯಿಂದ ನಿರೀಕ್ಷಿತ ಆದಾಯ ಸಂದಾಯವಾಗದೆ ಇರುವುದರಿಂದ ನಷ್ಟ ಉಂಟಾಗುವುದನ್ನು ಗಮನಿಸಿ ದಿ 13 9 2005ರಿಂದ ಈ ಮಾರ್ಗವನ್ನು ರದ್ದು ಪಡಿಸಲಾಯಿತು ಕಾರಣ ನಿರೀಕ್ಷಿತ ಆದಾಯ ಬಾರದೆ ಇರುವ ಹಿನ್ನಲೆಯಲ್ಲಿ ವೊಲ್ವೋ ಸಾರಿಗೆಯನ್ನು ಪ್ರಾರಂಬಿಸಲಾಗಿರುವುದಿಲ್ಲ

ಏ) ಎಂದಿನಿಂದ ಓಲ್ವೋ ಬಸ್ ಪ್ರಾರಂಭಿಸಲಾಗುವುದು?

ಈ ಸಾಲಿನ ಮೇ ತಿಂಗಳ ಕೊನೆಯ ವಾರದಿಂದ ಜಮಖಂಡಿಯಿಂದ ಬೆಂಗಳೂರಿಗೆ ಹೊಸ ಎ ಸಿ ಮೇಘದೂತ ಸಾರಿಗೆಯನ್ನು ಪ್ರಾರಂಭಿಸಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1168(1525)
ಮಾನ್ಯ ಸದಸ್ಯರ ಹೆಸರು ಶ್ರೀ ಸಿದ್ದು ಸಾವದಿ (ಜಮಖಂಡಿ)
ಉತ್ತರಿಸುವ ಸಚಿವರು ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಜಮಖಂಡಿ ಮಧ್ಯಭಾಗದಲ್ಲಿರುವ ಬಿಜಾಪೂರ–ಲೋಕಾಪೂರ ರಾಜ್ಯ ಹೆದ್ದಾರಿಯನ್ನು ಯಾವ ಅನುದಾನದಡಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ಹಾಗೂ ಇದು ಎಷ್ಟು ಕಿಲೋಮೀಟರ್ ಇದೆ,

ಈ ರಸ್ತೆಯನ್ನು ವಿಶ್ವಬ್ಯಾಂಕಿನ ಸಾಲ (4606)ದ ನೆರವಿನ ಅಡಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ (ಈ ರಸ್ತೆಯು 55 63 ಕಿಮೀ ಇರುತ್ತದೆ)

ಆ) ಜಮಖಂಡಿ ನಗರದ ಮಧ್ಯ ಭಾಗದಲ್ಲಿ ಹಾಯ್ದುಹೋಗುವ ಈ ರಸ್ತೆಗೆ ಡ್ರೈನೇಜ್ ಮಾಡಲಾಗುವುದೇ,

ಸುಮಾರು 310ಮೀ ಉದ್ದದ ಡ್ರೈನೇಜ್ ಮಾಡಲಾಗುವುದು

ಇ) ಹಾಗಿದ್ದಲ್ಲಿ ಇದನ್ನು ಎಸ್ಟಿಮೇಟಿನಲ್ಲಿ ಸೇರಿಸದಿರಲು ಕಾರಣಗಳೇನು,

ಅನ್ವಯಿಸುವುದಿಲ್ಲ

ಈ) ಇದರ ಟೆಂಡರ್ ಅವಧಿ ಎಷ್ಟು ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು?

ಇದರ ಟೆಂಡರ್ ಅವಧಿಯು 30 ತಿಂಗಳಾಗಿದ್ದು, ಕಾಮಗಾರಿಯನ್ನು 30–06–2007ರ ಒಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ